## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಉತ್ತರ

ವಿಷಯ:- ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಗೊಂಡು, ಡಿಸೆಂಬರ್-2020ರಲ್ಲಿ ನೇರ ನೇಮಕಾತಿಗೊಂಡು, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರುಗಳು ಡಿಸೆಂಬರ್-2022ರ ಮಾಹೆಗೆ 2 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುತ್ತಾರೆ. ಇವರುಗಳ ಪರಿವೀಕ್ಷಣಾ ಅವಧಿಯು ತೃಪ್ತಿಕರವೆಂದು ಘೋಷಿಸುವ ಸಲುವಾಗಿ ಅಗತ್ಯ ದಾಖಲಾತಿಗಳನ್ನು ನಿರ್ದೇಶಕರು, ಶಾಲಾ ಶಿಕ್ಷಣ (ಪದವಿಪೂರ್ವ) ಇವರ ಕಚೇರಿಗೆ ಸಲ್ಲಿಸಿ, ಸುಮಾರು 7 ತಿಂಗಳುಗಳು ಕಳೆದಿದ್ದರೂ ಇದುವರೆವಿಗೂ ಸದರಿಯವರ ಪರಿವೀಕ್ಷಣಾ ಅವಧಿ ಘೋಷಿಸದೆ (ಪಿ.ಪಿ. ಡಿಕ್ಲರೇಷನ್) ಇರುವುದಾಗಿ ತಿಳಿದು ಬಂದಿರುತ್ತದೆ. ಇದರಿಂದಾಗಿ ಅವರ ಸೇವಾ ಭದ್ರತೆ, ಕೆಲವೊಂದು ಆರ್ಥಿಕ ಸವಲತ್ತು ಸಿಗುವುದಿಲ್ಲ, ಮುಂದಿನ ಕೌನ್ಸಿಲಿಂಗ್ ವರ್ಗಾವಣೆಗೆ ಅರ್ಹತೆ ಇರುವುದಿಲ್ಲ. ಮೂರನೇ ವಾರ್ಷಿಕ ವೇತನ ಬಡ್ತಿ ಮಂಜೂರಾತಿಗೆ ತೊಂದರೆ ಉಂಟಾಗಿದೆ. ಹಲವಾರು ವಿಶ್ವವಿದ್ಯಾಲಯಗಳು ಪಿ.ಹೆಚ್.ಡಿ. ಪದವಿಗೆ ಅರ್ಜಿ ಆಹ್ವಾನಿಸಿದ್ದು, ಸದರಿ ಪ್ರವೇಶಕ್ಕೆ ಖಾಯಂ ಪೂರ್ವ ಸೇವಾವಧಿಯು ಕಡ್ಡಾಯವಾಗಿದ್ದು, ಅರ್ಜಿ ಸಲ್ಲಿಸಲು ಅವಕಾಶ ವಂಚಿತರಾಗುತ್ತಿದ್ದಾರೆ. ಈ ಸಂಬಂಧ ಈಗಾಗಲೇ ಹಲವು ಬಾರಿ ಪತ್ರಗಳನ್ನು ಬರೆದು, ನಿರ್ದೇಶಕರ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ವಹಿಸದೆ ಇರುವುದು ವಿಷಾಧನೀಯ.

ಆದಕಾರಣ, ಸದರಿ ವಿಷಯವನ್ನು ಆದ್ಯತೆ ಮೇರೆಗೆ ಅತಿ ಜರೂರು ಎಂದು ಪರಿಗಣಿಸಿ, ವಿಳಂಬಕ್ಕೆ ಆಸ್ಪದ ನೀಡದಂತೆ ಕೂಡಲೇ ಅರ್ಹ ಉಪನ್ಯಾಸಕರ ಪರಿವೀಕ್ಷಣಾ ಅವಧಿ ಘೋಷಣೆ ಮಾಡುವಂತೆ ನಿರ್ದೇಶಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡುವಂತೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರನ್ನು ಒತ್ತಾಯಿಸುತ್ತೇನೆ.

* * *

**ಉತ್ತರ**:-

2020ನೇ ಸಾಲಿನಲ್ಲಿ ನೇಮಕವಾದ ಉಪನ್ಯಾಸಕರ ಖಾಯಂ ಪೂರ್ವ ಅವಧಿಯನ್ನು ಘೋಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಇಲಾಖಾ ಹಂತದಲ್ಲಿ ಸಮಿತಿಯನ್ನು ರಚ್ಚಿಸಿದ್ದು, ಸ್ವೀಕೃತವಾದ ಪ್ರಾಸ್ತಾವನೆಗಳನ್ನು ಖಾಯಂ ಪೂರ್ವ ಅವಧಿ ಷರತ್ತುಗಳೊಂದಿಗೆ ಈ ಕೆಳಕಂಡ ಅಂಶಗಳು ಪೂರೈಸಿರುವುದನ್ನು ಖಚಿತ ಪಡಿಸಿಕೊಳ್ಳಲಾಗುತ್ತಿದೆ.

    ಎ) ಯಾವುದೇ ನ್ಯಾಯಂಗ/ಇಲಾಖಾ ವಿಚಾರಣೆ ಇಲ್ಲದೆ ಇರುವುದು.

    ಬಿ) ಹಿಂದಿನ ಸರ್ಕಾರಿ ಸೇವೆ ಇದ್ದಲ್ಲಿ ಎನ್ ಓ ಸಿ ನೀಡಿರುವುದು.

    ಸಿ) ಏಕ ಕಾಲದಲ್ಲಿ Dual degree ಪಡೆಯದೇ ಇರುವುದು.

2) ಸಮಿತಿಯು ಇಲ್ಲಿಯವರೆಗೆ 32 ಜಿಲ್ಲೆಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅರ್ಹವಿರುವ ಪ್ರಸ್ತಾವನೆಗಳನ್ನು ಖಾಯಂ ಪೂರ್ವ ಅವಧಿ ಘೋಷಣೆಗೆ ಶಿಫಾರಸ್ಸು ಮಾಡಿದೆ, ನಿರ್ದೇಶಕರ ಹಂತದಲ್ಲಿ ಅನುಮೋದನೆಗೆ ಕ್ರಮ ವಹಿಸಲಾಗುತ್ತಿದೆ.

A7

3) ದಿನಾಂಕ: 02-12-2019 ರಲ್ಲಿ ಶ್ರೀ ಯೋಗೇಶ್ ಕೆ.ಆರ್ ಮತ್ತು ಇತರರು, ತಮ್ಮ ವಕೀಲರ ಮುಖಾಂತರ ಡಬ್ಲ್ಯೂ ಪಿ.ಸಂಖ್ಯೆ: 52772/2019ರ ಪ್ರಕರಣದಲ್ಲಿ ನೀಡಿರುವ ಮಧ್ಯಂತರ ಆದೇಶ ಐ.ಎ 01/2023ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದೆಂದು ತಿಳಿಸಿ ಖಾಯಂ ಪೂರ್ವ ಘೋಷಣೆಯನ್ನು ಮಾಡಬಾರದೆಂದು ಕೋರಿರುತ್ತಾರೆ. ಸದರಿ ತಡೆಯಾಜ್ಞೆಯಲ್ಲಿ ಮಾನ್ಯ ನ್ಯಾಯಾಲಯವು ಖಾಯಂ ಪೂರ್ವ ಘೋಷಿಸಬಾರದೆಂದು ತಿಳಿಸಿರುವ ಉಪನ್ಯಾಸಕರನ್ನು ಹೊರತುಪಡಿಸಿ ಉಳಿದ ಅರ್ಹ ಉಪನ್ಯಾಸಕರ ಖಾಯಂ ಪೂರ್ವ ಸೇವಾವಧಿಯನ್ನು ಡಬ್ಲ್ಯು.ಪಿ.ಸಂ:52772/2019ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಹಾಗೂ ಇತರೆ ನ್ಯಾಯಾಲಯಗಳ ಪ್ರಕರಣಗಳ ಆದೇಶಕ್ಕೆ ಒಳಪಟ್ಟು ಘೋಷಿಸಲು ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ:ಇಪಿ 239 ಡಿಜಿಡಬ್ಲ್ಯೂ 2023**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.